JULY 13, 2024

AKASHAVANI - DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ಇದೇ 15 ರಿಂದ 26 ರ ವರೆಗೆ, ರಾಜ್ಯ ವಿಧಾನ ಮಂಡಲ ಅಧಿವೇಶನ –ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಮಾಹಿತಿ.
- ಕಾವೇರಿ ನದಿ ನೀರು ಹಂಚಿಕೆ; ನಾಳೆ ಸಂಜೆ 4 ಗಂಟೆಗೆ, ಸರ್ವಪಕ್ಷ ಸಭೆ – ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪಷ್ಟನೆ.
- ಅನಿವಾಸಿ ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸಲು, ಪ್ರತ್ಯೇಕ ಸಚಿವಾಲಯ ಸ್ಥಾಪನೆಗೆ, ಪ್ರಸ್ತಾವ – ಸಮಿತಿ ಉಪಾಧ್ಯಕ್ಷೆ ಆರತಿ ಕೃ ್ಣ, ಹೇಳಿಕೆ.
- ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ, ರಾಜ್ಯಾದ್ಯಂತ ಇಂದು, ರಾಷ್ಟ್ರೀಯ ಲೋಕ್ ಅದಾಲತ್.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯ ವಿಧಾನ ಮಂಡಲದ ಅಧಿವೇಶನ, ಇದೇ 15 ರಿಂದ 26ರ ವರೆಗೆ, 9 ದಿನಗಳ ಕಾಲ ನಡೆಯಲಿದೆ ಎಂದು, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಮೊದಲ ದಿನ ಅಗಲಿದ ಗಣ್ಯರಿಗೆ ಸಂತಾಪ ಸೂಚಕ ಸಭೆ ನಡೆಯಲಿದೆ. 9 ದಿನಗಳ ಅವಧಿಯಲ್ಲಿ ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆ, ಶೂನ್ಯ ವೇಳೆ, ನಿಯಮ 69, ಖಾಸಗಿ ಸದಸ್ಯರ ವಿಧೇಯಕಗಳು ಸೇರಿದಂತೆ, ಹಲವು ವಿಷಯಗಳ ಮೇಲೆ ಚರ್ಚೆ ನಡೆಯಲಿದೆ ಎಂದರು.

<><><>

ಜುಲೈ 20 ವಿಶ್ವ ಚೆಸ್ ದಿನ. ಶಾಸಕರು, ಸಚಿವರು, ಅಧಿಕಾರಿಗಳು ಮತ್ತು ಪತ್ರಕರ್ತರಿಗಾಗಿ 'ಶಾಸಕರ ಕಪ್' ಚೆಸ್ ಪಂದ್ಯಾವಳಿಯನ್ನು ಅಂದು ಆಯೋಜಿಸಲಾಗಿದೆ ಎಂದು ಖಾದರ್ ಅವರು ಮಾಹಿತಿ ನೀಡಿದರು.

<><><>

ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಮಾತನಾಡಿ, ಈ ಬಾರಿ 854 ಪ್ರಶ್ನೆಗಳನ್ನು ಇಲ್ಲಿಯ ತನಕ ಸ್ವೀಕರಿಸಲಾಗಿದೆ. ಅಧಿವೇಶನದ ಕಾಲಾವಧಿ ವಿಸ್ತರಣೆ ಕುರಿತಂತೆ, ಕಲಾಪ ಸಲಹಾ ಸಮಿತಿಯೊಂದಿಗೆ ಚರ್ಚಿಸಿ, ನಿರ್ಧಾರ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

<><><>

ತಮಿಳುನಾಡಿಗೆ ಪ್ರತಿ ದಿನ 1 ಟಿ.ಎಂ.ಸಿ. ನೀರು ಬಿಡುಗಡೆ ಮಾಡಬೇಕೆಂಬ, ಪ್ರಾಧಿಕಾರದ ಆದೇಶದ ವಿರುದ್ಧ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣದಲ್ಲಿ, ಸಂಪುಟ ಸಹೋದ್ಯೋಗಿಗಳು ಹಾಗೂ ಹಿರಿಯ ಅಧಿಕಾರಿಗಳ ಜೊತೆ ಅವರು ಸುದೀರ್ಘ ಚರ್ಚೆ ನಡೆಸಿದರು. ರಾಜ್ಯದ ಮುಂದಿನ ನಡೆ ಏನು ಎಂಬ ಬಗ್ಗೆ, ನಾಳೆ ಸಂಜೆ 4 ಗಂಟೆಗೆ ಸರ್ವಪಕ್ಷ ಸಭೆ ಕರೆದು, ಚರ್ಚಿಸಿ, ತೀರ್ಮಾನಿಸಲಾಗುವುದು ಎಂದು, ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಮುಖ್ಯಮಂತ್ರಿ ಪ್ರಕಟಿಸಿದ್ದಾರೆ. ವಾಡಿಕೆಯಂತೆ ಮಳೆಯಾಗುತ್ತದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆದರೆ, ಕಾವೇರಿ ನದಿ ಪಾತ್ರದಲ್ಲಿ, ಶೇಕಡ 28ರಷ್ಟು ಒಳ ಹರಿವಿನ ಕೊರತೆ ಇದೆ. ಕಾವೇರಿ ಜಲಾನಯನ ಪ್ರದೇಶದ ಎಲ್ಲ 4 ಜಲಾಶಯಗಳಲ್ಲಿ, ಕೇವಲ 60 ಟಿ.ಎಂ.ಸಿ. ನೀರು ಲಭ್ಯವಿದೆ ಎಂದು, ಮುಖ್ಯಮಂತ್ರಿ ಸ್ಪಷ್ಟ ಪಡಿಸಿದ್ದಾರೆ.

<><><>

ಕೇಂದ್ರ ಸರ್ಕಾರದ ನೀತಿ ಆಯೋಗ ಸಂಚಾಲಿತ, ಸಂಪೂರ್ಣತಾ ಅಭಿಯಾನದ ಮಹತ್ವಾಕಾಂಕ್ಷಿ ತಾಲೂಕು ಯೋಜನೆ ಅಡಿ, ಯಾದಗಿರಿ ಜಿಲ್ಲೆ ವಡಗೇರಾ ಆಯ್ಕೆಯಾಗಿದೆ. ಯಾದಗಿರಿ ಜಿಲ್ಲಾಧಿಕಾರಿ ಬಿ.ಸುಶೀಲಾ, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಜಿಲ್ಲಾಧಿಕಾರಿ ಬಿ.ಸುಶೀಲಾ ಧ್ವನಿ 32 ಸೆಕೆಂದುಗಳು

<><><>

ರಾಷ್ಟ್ರೀಯ ತೋಟಗಾರಿಕೆ ಮಿಷನ್, ಎನ್.ಎಚ್.ಎಂ ಯೋಜನೆ ಅಡಿ, ಜೇನು ಸಾಕಾಣಿಕೆಗೆ, ಸಹಾಯ ಧನ ಕೋರಿ, ಆಸಕ್ತ ರೈತರು ನಾಡಿದ್ದು 15ನೇ ತಾರೀಖಿನೊಳಗೆ, ಅರ್ಜಿ ಸಲ್ಲಿಸಬಹುದು ಎಂದು, ಧಾರವಾಡ ತೋಟಗಾರಿಕೆ ಇಲಾಖೆಯ, ಹಿರಿಯ ಸಹಾಯಕ ನಿರ್ದೇಶಕ ಇಮ್ತಿಯಾಜ್ ಚಂಗಾಪುರಿ ತಿಳಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಇಮ್ತಿಯಾಜ್ ಚಂಗಾಪುರಿ ಧ್ವನಿ 24 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮಕ್ಕಳ ಹಕ್ಕುಗಳ ರಕ್ಷಣೆ, ಜಿಲ್ಲಾಡಳಿತ ಎಲ್ಲ ಇಲಾಖೆಗಳ ಅಧಿಕಾರಿಗಳ ಹೊಣೆ. ಪರಸ್ಪರ ಸಮನ್ವಯತೆ ಮತ್ತು ಸಹಕಾರದಿಂದ, ಮಕ್ಕಳ ಬಾಲ್ಯ ಕಸಿಯದಂತೆ ನೋಡಿಕೊಳ್ಳಬೇಕು ಎಂದು, ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯ ಶಶಿಧರ ಕೋಸಂಬೆ, ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ವಿಜಯನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯ ಒಟ್ಟು 84 ಮಕ್ಕಳಲ್ಲಿ ಶಂಕಿತ ಡೆಂಘಿ ಕಂಡು ಬಂದಿದೆ. 16 ಪ್ರಕರಣಗಳು ಡೆಂಘಿ ಎಂದು ದೃಢಪಟ್ಟಿವೆ. ಭ್ರೂಣ ಲಿಂಗ ಪತ್ತೆಗೆ ಸಂಬಂಧಿಸಿ, ಮೂರು ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ನೋಟಿಸ್ ನೀಡಲಾಗಿದೆ ಎಂದರು.

<><><>

ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದನ್ವಯ, ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಪ್ರತಿ ಜಿಲ್ಲೆಯಲ್ಲಿಯೂ ಇಂದು, ರಾಷ್ಟ್ರೀಯ ಜನತಾ ನ್ಯಾಯಾಲಯ, ಲೋಕ್ ಅದಾಲತ್ ಆಯೋಜಿಸಲಾಗಿದೆ. ರಾಜೀ ಸಂಧಾನದ ಮೂಲಕ, ಬಗೆಹರಿಸಬಹುದಾದ ಚಾಲ್ತಿ ಪ್ರಕರಣಗಳನ್ನು, ಜನತಾ ನ್ಯಾಯಾಲಯದಲ್ಲಿ, ಶೀಘ್ರಗತಿಯಲ್ಲಿ, ಒಂದೇ ಬಾರಿಗೆ, ಇತ್ಯರ್ಥ ಪರಿಹರಿಸಿಕೊಳ್ಳಬಹುದಾಗಿದೆ. ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳುವಂತೆ, ಆಯಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಆಯಾ ಜಿಲ್ಲೆಗಳ ಪ್ರಧಾನ ನ್ಯಾಯಾಧೀಶರು. ಕೋರಿದ್ದಾರೆ.

<><><>

ಗದಗ ಜಿಲ್ಲೆಯಾದ್ಯಂತ, ಪ್ರಥಮ ಹಂತದಲ್ಲಿ, 100 ಗ್ರಾಮಗಳನ್ನು ವ್ಯಾಜ್ಯ ಮುಕ್ತವಾಗಿಸಲು ಯೋಜಿಸಲಾಗಿದೆ ಎಂದು ಕಾನೂನು ಖಾತೆ ಸಚಿವ ಎಚ್.ಕೆ.ಪಾಟೀಲ ತಿಳಿಸಿದ್ದಾರೆ. ಗದಗ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಜರುಗಿದ, ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು, ಮಾತನಾಡಿದರು.

<><><>

ಅನಿವಾಸಿ ಕನ್ನಡಿಗರ ಅವಶ್ಯಕತೆ ಮತ್ತು ಸಮಸ್ಯೆಗಳಿಗೆ ಸ್ಪಂದಿಸಲು, ಪ್ರತ್ಯೇಕ ಸಚಿವಾಲಯ ಪ್ರಾರಂಭಿಸಲು, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಸೂಕ್ತ ನೀತಿ–ನಿಯಮಾವಳಿ ರೂಪಿಸಲಾಗುತ್ತಿದೆ ಎಂದು, ಅನಿವಾಸಿ ಭಾರತೀಯ ಸಮಿತಿ ಉಪಾಧ್ಯಕ್ಷೆ ಡಾಕ್ಟರ್ ಆರತಿ ಕೃ ್ಣ ತಿಳಿಸಿದ್ದಾರೆ. ಅನಿವಾಸಿ ಕನ್ನಡಿಗರು ಹಾಗೂ ಕುಟುಂಬದವರಿಂದ ಅಹವಾಲು ಸ್ವೀಕರಿಸಲು, ಶಿವಮೊಗ್ಗ ಜಿಲ್ಲಾಧಿಕಾರಿ ಕಚೇರಿಯಲ್ಲಿ ಏರ್ಪಡಿಸಲಾಗಿದ್ದ, ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅನಿವಾಸಿ ಭಾರತೀಯ ಸಮಿತಿಯನ್ನು ರಾಜ್ಯದ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ 2008 ರಲ್ಲಿ ಸ್ಥಾಪಿಸಲಾಗಿದೆ. ವಿಶ್ವದೆಲ್ಲೆಡೆ ನೆಲೆಸಿರುವ ಅನಿವಾಸಿ ಕನ್ನಡಿಗರ ಆಕಾಂಕ್ಷೆ, ಅವಶ್ಯಕತೆ ಮತ್ತು ನಿರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು, 2016 ರಲ್ಲಿ ಅನಿವಾಸಿ ಭಾರತೀಯ ನೀತಿಯನ್ನು ಜಾರಿಗೊಳಿಸಲಾಗಿದೆ ಎಂದರು.

<><><>

ರಾಜ್ಯದಲ್ಲಿ ಡೆಂಘಿ ಜ್ವರ ಸ್ಥಿತಿಗತಿಯ, ಸೂಕ್ಷ್ಮ ಮತ್ತು ಸೂಕ್ತ ಮೇಲ್ವಿಚಾರಣೆಗೆ, ವಾರ್ ರೂಮ್ ಪ್ರಾರಂಭಿಸಿ, ಡೆಂಘಿ ಪೀಡಿತರ ಮೇಲೆ 14 ದಿನಗಳು ನಿಗಾ ವಹಿಸಬೇಕೆಂದು, ಆರೋಗ್ಯ ಇಲಾಖೆ ಎಲ್ಲ 31 ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ.

<><><>

ದಾವಣಗೆರೆ ಜಿಲ್ಲೆಯಲ್ಲಿ ಡೆಂಘಿ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿದೆ. ಕಳೆದ 40 ದಿನಗಳಲ್ಲಿ 212 ಪ್ರಕರಣಗಳು ದೃಢಪಟ್ಟಿವೆ ಎಂದು ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾಕ್ಟರ್ ಗಂಗಾಧರ್ ತಿಳಿಸಿದ್ದಾರೆ.

<><><>

ಧಾರವಾಡ ಜಿಲ್ಲೆಯಲ್ಲಿ ಇಲ್ಲಿಯ ವರೆಗೆ, ಸಾವಿರದ 765 ಜನರಿಗೆ, ಡೆಂಘಿ ಪರೀಕ್ಷೆ ಮಾಡಲಾಗಿದೆ; 334 ಜನರಲ್ಲಿ ಡೆಂಘಿ ಜ್ವರ ಧೃಡಪಟ್ಟಿದೆ. ಅವರು ಗುಣಮುಖರಾಗಿದ್ದು, ಸಿವಿಲ್ ಆಸ್ಪತ್ರೆ, ಕಿಮ್ಸ್ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ, 15 ಜನ ಡೆಂಘಿ ಬಾಧಿತರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು, ಉಸ್ತುವಾರಿ ಸಚಿವ ಸಂತೋಷ ಲಾಡ್ ತಿಳಿಸಿದ್ದಾರೆ. ಧಾರವಾಡ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ಡೆಂಘಿ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ, ಆರೋಗ್ಯಾಕಾಂಕ್ಷಿಗಳ ಜೊತೆ, ಸಚಿವರು ಸಮಾಲೋಚಿಸಿದರು. ಧಾರವಾಡ ಜಿಲ್ಲಾಸ್ಪತ್ರೆಗೆ ಉತ್ತರಕನ್ನಡ, ಬೆಳಗಾವಿ, ಗದಗ, ಬಾಗಲಕೋಟ, ಹಾಗೂ ಹಾವೇರಿ ಜಿಲ್ಲೆಗಳಿಂದ ರೋಗಿಗಳು ಚಿಕಿತ್ಸೆಗಾಗಿ ಬರುತ್ತಾರೆ. ಆಸ್ಪತ್ರೆಗೆ ಹೆಚ್ಚುವರಿ ಸೌಲಭ್ಯ ಕಲ್ಪಿಸಬೇಕಿದೆ. ಈ ಕುರಿತು ಪ್ರಸ್ತಾವ ಸಲ್ಲಿಸುವಂತೆ ಸಚಿವರು ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

<><><>

ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕಿನ, ಐತಿಹಾಸಿಕ ಪ್ರದೇಶ ಸೋಂದಾದ ಕಡೇಗುಂಟದಲ್ಲಿ, 800 ವರ್ಷಗಳ ಹಿಂದಿನ ವೀರಗಲ್ಲು ಶಾಸನ ಬೆಳಕಿಗೆ ಬಂದಿದೆ. ಕಡೇಗುಂಟದ ಶಶಾಂಕ್ ಮರಾಠೆ ಅವರು ನೀಡಿದ ಮಾಹಿತಿ ಆಧರಿಸಿ, ಇತಿಹಾಸಕಾರರಾದ ಸೋಂದೆಯ ಡಾಕ್ಟರ್ ಲಕ್ಷ್ಮೀಶ್ ಹಾಗೂ ಮೈಸೂರಿನ ಪ್ರೊಫೆಸರ್ ನಾಗರಾಜ್ ರಾವ್ ಅವರು ಕೈಗೊಂಡ ಅಧ್ಯಯನದ ವೇಳೆ, ಈ ವೀರಗಲ್ಲು ಶಾಸನ, 12ನೇ ಶತಮಾನಕ್ಕೆ ಸೇರಿದೆ ಎಂದು ತಿಳಿದು ಬಂದಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಡಾಕ್ಟರ್ ಲಕ್ಷ್ಮೀಶ್ ಹೆಗಡೆ ಸೋಂದಾ.

<><><>

ಡಾಕ್ಟರ್ ಲಕ್ಷ್ಮೀಶ್ ಹೆಗಡೆ ಧ್ವನಿ 40 ಸೆಕೆಂದುಗಳು

<><><>

ರಾಯಚೂರು ಜಿಲ್ಲೆ, ಹಟ್ಟಿ ಚಿನ್ನದ ಗಣಿಯಲ್ಲಿ, ಅದಿರು ಕುಸಿದು, ಮೌನೇಶ ಎಂಬ 50 ವರ್ಷದ ಸ್ಥಳೀಯ ಕಾರ್ಮಿಕ ಸ್ಥಳದಲ್ಲೇ ಮೃತಪಟ್ಟು, ಐವರು ಗಾಯಗೊಂಡ ಘಟನೆ, ಶುಕ್ರವಾರ ಬೆಳಗಿನ ಜಾವ ಸಂಭವಿಸಿದೆ. ಹಟ್ಟಿ ಚಿನ್ನದ ಗಣಿ ಕಂಪೆನಿಯ ಅಧ್ಯಕ್ಷ ಹಾಗೂ ಶಾಸಕ ಜೆ.ಟಿ. ಪಾಟೀಲ, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

<><><>

ಕನ್ನಡ ಚಿತ್ರರಂಗದ ನಟಿ, ಖ್ಯಾತ ನಿರೂಪಕಿ ಅಪರ್ಣಾ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಬೆಂಗಳೂರಿನ ಬನಶಂಕರಿ ಚಿತಾಗಾರದಲ್ಲಿ, ನೆರವೇರಿತು. ಇದಕ್ಕೂ ಮೊದಲು, ಬೆಂಗಳೂರು ಬನಶಂಕರಿಯ, ಅಪರ್ಣಾ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ತಮ್ಮ ನೆಚ್ಚಿನ ಕಲಾವಿದೆಗೆ ಅನೇಕರು ಅಂತಿಮ ನಮನ ಸಲ್ಲಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಎಚ್.ಡಿ. ಕುಮಾರಸ್ವಾಮಿ ಅವರು, ಸಾಮಾಜಿಕ ಮಾಧ್ಯಮದಲ್ಲಿ ಸಂತಾಪ ಸೂಚಿಸಿ, ಕಂಬನಿ ಮಿಡಿದಿದ್ದಾರೆ.

<><><>

ಆ ಾಢ ಮಾಸದ ಮೊದಲ ಶುಕ್ರವಾರದ ಹಿನ್ನೆಲೆ, ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಸಾವಿರಾರು ಭಕ್ತಾದಿಗಳು ಆಗಮಿಸಿ, ದೇವರ ದರ್ಶನ ಪಡೆದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಇದೇ 15 ರಿಂದ 26 ರ ವರೆಗೆ, ರಾಜ್ಯ ವಿಧಾನ ಮಂಡಲ ಅಧಿವೇಶನ –ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಮಾಹಿತಿ.
- ಕಾವೇರಿ ನದಿ ನೀರು ಹಂಚಿಕೆ; ನಾಳೆ ಸಂಜೆ 4 ಗಂಟೆಗೆ, ಸರ್ವಪಕ್ಷ ಸಭೆ – ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪಷ್ಟನೆ.
- ಅನಿವಾಸಿ ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸಲು, ಪ್ರತ್ಯೇಕ ಸಚಿವಾಲಯ ಸ್ಥಾಪನೆಗೆ, ಪ್ರಸ್ತಾವ – ಸಮಿತಿ ಉಪಾಧ್ಯಕ್ಷೆ ಆರತಿ ಕೃ ್ಣ, ಹೇಳಿಕೆ.
- ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ, ರಾಜ್ಯಾದ್ಯಂತ ಇಂದು, ರಾಷ್ಟ್ರೀಯ ಲೋಕ್ ಅದಾಲತ್.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ

ADDEITIONAL NEWS PIECES -

ಪ್ರದೇಶ ಸಮಾಚಾರ
13.07.2024
ಶಕ್ತಿ/ಯೋಜನೆ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಖಾತ್ರಿ ಯೋಜನೆಗಳಲ್ಲಿ ಒಂದಾದ, 'ಸ್ತ್ರೀ ಶಕ್ತಿ ಯೋಜನೆ'ಗೆ, ಒಂದು ವ ರ್ಷ ಪೂರ್ಣಗೊಂಡಿದೆ.

ಉತ್ತರಕನ್ನಡ ಜಿಲ್ಲೆಯಲ್ಲಿ, ಶಕ್ತಿ ಯೋಜನೆ ಅಡಿ, 6 ಕೋಟಿ 19 ಲಕ್ಷ ಮಹಿಳೆಯರು, ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ಜಿಲ್ಲೆಯಲ್ಲಿ ಪ್ರತೀ ದಿನ 1 ಲಕ್ಷ 50 ಸಾವಿರ ಮಹಿಳೆಯರು ಈ ಉಚಿತ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ.

178 ಕೋಟಿ 12 ಲಕ್ಷ ರೂಪಾಯಿ ಮೊತ್ತದ, ಉಚಿತ ಟಿಕೆಟ್‌ಗಳನ್ನು ಮಹಿಳೆಯರಿಗೆ ವಿತರಿಸಲಾಗಿದೆ ಎಂದು, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಉತ್ತರಕನ್ನಡ ವಿಭಾಗೀಯ ನಿಯಂತ್ರಕ ಶ್ರೀನಿವಾಸ ತಿಳಿಸಿದ್ದಾರೆ.

ಹರ್ಷ/ಉಮೇಶ/ಪಿಟಿಸಿ ಕಾರವಾರ

ಪ್ರದೇಶ ಸಮಾಚಾರ
13.07.2024
ಅಗ್ನಿವೀರ್/ಸಿಆರ್‌ಪಿಎಫ್

ಅಗ್ನಿವೀರರಾಗಿ ನೇಮಕಗೊಂಡು, ಸೇವೆ ಪೂರ್ಣಗೊಳಿಸುವ, ಯುವಜನತೆಯನ್ನು ಮರು ನೇಮಕ ಮಾಡಿಕೊಳ್ಳಲು, ಕೇಂದ್ರೀಯ ಮೀಸಲು ಪೊಲೀಸ್ ಪಡೆ – ಸಿ.ಆರ್.ಪಿ.ಎಫ್. ನಲ್ಲಿ ವ್ಯವಸ್ಥೆಯಾಗಿದೆ.

ಇದಕ್ಕೆ ತಕ್ಕಂತೆ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿದೆ. ಅಗ್ನಿವೀರರಿಗೆ ಸಿ.ಆರ್.ಪಿ.ಎಫ್.ನಲ್ಲಿ ಶೇಕಡ 10ರ ಷ್ಟ ಮೀಸಲಾತಿ ಕಲ್ಪಿಸಲಾಗುವುದು ಎಂದು, ಸಿ.ಆರ್.ಪಿ.ಎಫ್ ಮಹಾ ನಿರ್ದೇಶಕ ಅನೀಶ್ ದಯಾಳ್ ಸಿಂಗ್ ತಿಳಿಸಿದ್ದಾರೆ.

ಹರ್ಷ/ಉಮೇಶ/ಪಿಐಬಿ/ನ್ಯೂಸ್ ಆನ್ ಏರ್